# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570 006.

ಸಂಖ್ಯೆ : ಕರಾಮುವಿ/ಅಸಾವಿ/01-02/2020-21 ದಿನಾಂಕ: 21-05-2020

## ದರಪಟ್ಟಿ ಆಹ್ವಾನದ ಬಗೆಗೆ

ವಿಷಯ: ಪ್ರಸಾರಾಂಗ ವಿಭಾಗದಲ್ಲಿ ಪುಸ್ತಕಗಳ ಮಾರಾಟಕ್ಕೆ ಬಿಲ್ಲು ಪುಸ್ತಕಗಳನ್ನು ಮುದ್ರಿಸಲು ದರಪಟ್ಟಿ ಕೋರಿ.

*********

ಕರಾಮುವಿಯುಲ್ಲಿ 2008-09 ನೇ ಸಾಲಿನಲ್ಲಿ ಪ್ರಸಾರಾಂಗವು ವಿದ್ಯುಕ್ತವಾಗಿ ಪ್ರಾರಂಭವಾಗಿದ್ದು, ಪ್ರಸಾರಾಂಗದ ವತಿಯಿಂದ ಹಲವಾರು ಪುಸ್ತಕಗಳನ್ನು ಪ್ರಕಟಗೊಳಿಸಲಾಗಿರುತ್ತದೆ. ಇವುಗಳನ್ನು ಮಾರಾಟ ಮಾಡುತ್ತಿದ್ದು ಈ ಮಾರಾಟ ವ್ಯವಸ್ಥೆಗೆ ವಿವಿಯ ರಶೀದಿ ಪುಸ್ತಕಗಳನ್ನು ಮುದ್ರಿಸಲು ತೀರ್ಮಾನಿಸಲಾಗಿದ್ದು ಈ ಕೆಳಕಂಡ Specification. ರೀತ್ಯಾ ಮುದ್ರಿಸಲು ತಗುಲುವ ದರಗಳನ್ನು (ಎಲ್ಲಾ ತೆರಿಗೆಗಳು ಸೇರಿ) ನಮೂದಿಸಲು ದರಪಟ್ಟಿ ಆಹ್ವಾನಿಸಲಾಗಿದೆ. Specification ಹಾಗು ನಿಯಮ ಮತ್ತು ಷರತ್ತುಗಳು ಈ ಕೆಳಕಂಡಂತಿವೆ.

**ರಶೀದಿ ಪುಸ್ತಕ ಮುದ್ರಣದ Specification:**

1. ರಶೀದಿ ಪುಸ್ತಕಗಳ ಅಳತೆಯು 19 ಸೆಂ.ಮೀ, ಅಗಲ, 22 ಸೆಂ.ಮೀ, ಉದ್ದ ಹಾಗು 3 ವಿವಿಧ ಶೇಷಾಸ್ಯೆ ಬಣ್ಣದ ಕಾಗದದಲ್ಲಿ ತ್ರಿಪ್ಲಿಕೇಟ್ನಲ್ಲಿ ಬಳಸಿ ಒಂದು ಪುಸ್ತಕದಲ್ಲಿ 50 ಸಂಖ್ಯೆಯ ಹಾಳೆಗಳನ್ನೊಳಗೊಂಡಂತೆ ಒಟ್ಟು 46 ಪುಸ್ತಕಗಳನ್ನು ಮುದ್ರಿಸಬೇಕಾಗಿರುತ್ತದೆ.
2. ವಿಶ್ವವಿದ್ಯಾನಿಲಯವು ರಶೀದಿ ಪುಸ್ತಕದ ಒಳಪುಟಗಳಿಗೆ ನಮೂದಿಸುವ (ತ್ರಿಪ್ಲಿಕೇಟ್ನಗಳಿಗೆ) ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸಬೇಕಾಗಿರುತ್ತದೆ.
3. ರಶೀದಿಗಳನ್ನು ಕಟ್ಟಿಂಗ್ ಮಾಡಲು ಸಾಧ್ಯವಾಗುವಂತೆ ಮಿಷಿನ್ನಿಂದ ಎಚ್ಚಿಂಗ್ ಮಾಡಬೇಕಾಗುತ್ತದೆ.
4. ರಶೀದಿ ಪುಸ್ತಕದ ಮೇಲುಹೊದಿಕೆಗೆ(Cover Pages) 90 ಜಿಎಸ್ಎಂ ಬಣ್ಣದ ಪೇಪರ್ ಬಳಸಬೇಕಾಗುತ್ತದೆ.
5. ವಿಶ್ವವಿದ್ಯಾನಿಲಯವು ಒದಗಿಸುವ ರಶೀದಿ ಪುಸ್ತಕದ ಮಾದರಿಯನ್ನು ತಾವೇ ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ.
6. ಮೇಲ್ಕಂಡ Specification ಗಳಂತೆ ಒಂದು ರಶೀದಿ ಪುಸ್ತಕವನ್ನು ಸಿದ್ಧಪಡಿಸಲು ತಗುಲುವ ದರವನ್ನು (ಎಲ್ಲಾ ತೆರಿಗೆಗಳು ಸೇರಿದಂತೆ) ಸಲ್ಲಿಸುವುದು.

**ನಿಯಮ ಮತ್ತು ಷರತ್ತುಗಳು:**

1. ಸದರಿ ಪುಸ್ತಕಗಳನ್ನು ವಿ.ವಿ ನಿಲಯ ಸೂಚಿಸಿದ Specification ರೀತ್ಯಾ ಸಿದ್ಧಪಡಿಸಿ ನಿಗಧಿತ ದಿನಾಂಕದೊಳಗೆ ಸರಬರಾಜು ಮಾಡಲು ಸಿದ್ಧರಿರಬೇಕು.
2. ಈ ಪುಸ್ತಕದ ಮುದ್ರಣಕ್ಕೆ ನಿಗದಿಪಡಿಸುವ ದರಗಳು ಇದೇ ವಿಷಯವಾಗಿ ಮತ್ತೊಮ್ಮೆ ದರಪಟ್ಟಿ ಕರೆಯುವವರೆಗೆ ಅಥವಾ ಒಂದು ವರ್ಷ (365 ದಿನಗಳು) ಅವಧಿಗೆ ಚಾಲ್ತಿಯಲ್ಲಿರುತ್ತವೆ.
3. ಒಮ್ಮೆ ದರಪಟ್ಟಿ ಸಲ್ಲಿಸಿ ಕನಿಷ್ಠತಮ ದರ ನಿಗಧಿಯಾದ ನಂತರ ಸಿದ್ದಪಡಿಸಲು ಸಬೂಬು ನೀಡಿದರೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತದೆ.
4. **GST** ನೊಂದಣಿದಾರರಿಗೆ ಮಾತ್ರ ಮುದ್ರಣ ಕೆಲಸ ನಿರ್ವಹಿಸಲು ಅವಕಾಶವಿರುತ್ತದೆ. ತಪ್ಪಿದ್ದಲ್ಲಿ ದರಪಟ್ಟಿಯನ್ನು ತಿರಸ್ಕರಿಸಲಾಗುವುದು.
5. ಸದರಿ ದರಪಟ್ಟಿಯನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ವಿ.ವಿ.ಯು ಹೊಂದಿರುತ್ತದೆ.
6. ದರಪಟ್ಟಿಯನ್ನು ಮೊಹರಾದ ಲಕೋಟೆಯಲ್ಲಿಟ್ಟು **"ಪ್ರಸಾರಾಂಗ ವಿಭಾಗದಲ್ಲಿ ಪುಸ್ತಕಗಳ ಮಾರಾಟಕ್ಕೆ ರಶೀದಿ ಪುಸ್ತಕಗಳನ್ನು ಮುದ್ರಿಸಲು ದರಪಟ್ಟಿ"** ಎಂಬುದಾಗಿ ಶೀರ್ಷಿಕೆಯನ್ನು ಬರೆದು ದಿನಾಂಕ: 29-05-2020ರ ಸಂಜೆ 5-00ರೊಳಗೆ ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು, ಇವರ ಹೆಸರಿಗೆ ಖುದ್ದಾಗಿ/ ಅಂಚೆ ಮೂಲಕ ಸಲ್ಲಿಸುವುದು, ಅಂಚೆ ವಿಳಂಬಕ್ಕೆ ವಿ.ವಿ.ಯು ಜವಾಬ್ದಾರಿಯಾಗುವುದಿಲ್ಲ.

ಆದೇಶದ ಮೇರೆಗೆ

ಕುಲಸಚಿವ

ಪ್ರತಿಗಳು:

1. ವಿಶೇಷ ಕರ್ತವ್ಯಾಧಿಕಾರಿಗಳು ಕುಲಪತಿಗಳ ಆಪ್ತಶಾಖೆ, ಕರಾಮುವಿ, ಮೈಸೂರು,
2. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು,
3. ಕಛೇರಿ ಪ್ರತಿ.

Scanned with CamScanner